## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

ಎಸ್.ಸಿ. ಸಂಖ್ಯೆ 121/2019

| | | |
|---|---|---|
| ಸಾಕ್ಷಿದಾರರ ಹೆಸರು | : ನಾಗಲಾಂಬಿಕ | ಪಿಡಬ್ಲ್ಯೂ : 4 |
| ತಂದೆಯ / ಗಂಡನ ಹೆಸರು | : ವೀರಭದ್ರಪ್ಪ | ಸಿಡಬ್ಲ್ಯೂ : 11 |
| ವಯಸ್ಸು | : 52 ವರ್ಷ | |
| ಉದ್ಯೋಗ | : ಗೃಹಿಣಿ | |
| ವಾಸಸ್ಥಳ | : ಕಾವೇರಿನಗರ , ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 08.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ಚಾಸಾ.3 ನನ್ನ ಗಂಡ. ಚಾಸಾ.1, ಚಾಸಾ.2 ಮತ್ತು ಚಾಸಾ.12 ನನಗೆ ಗೊತ್ತು. ಚಾಸಾ.13 ರಿಂದ ಚಾಸಾ.16 ರವರನ್ನು ನೋಡಿದ್ದೇನೆ. ನ್ಯಾಯಾಲಯದ ಮುಂದೆ ಇರುವ ನಾಲ್ಕು ಜನ ಆರೋಪಿತರನ್ನು ನೋಡಿರುತ್ತೇನೆ ಮತ್ತು ಇನ್ನೊಬ್ಬ ಆರೋಪಿ ಮಂಜುನಾಥ್ ನನ್ನು ಸಹ ನೋಡಿರುತ್ತೇನೆ.

2. ನಾನು ಮೈಸೂರಿನ ಕಾವೇರಿನಗರದಲ್ಲಿ ತಿಮ್ಮೆಗೌಡರಿಗೆ ಸೇರಿದ ಮನೆಯಲ್ಲಿ ಬಾಡಿಗೆಗೆ ಕಳೆದ 35 ವರ್ಷಗಳಿಂದ ವಾಸ ಮಾಡುತ್ತಿದ್ದೇನೆ. ಚಾಸಾ.2 ರವರ ಮನೆಯ ಬಳಿಯಲ್ಲೇ ನಮ್ಮ ಮನೆ ಸಹ ಇದೆ. ಈಗ್ಗೆ 6 ವರ್ಷ 1 ತಿಂಗಳ ಹಿಂದೆ ನಮ್ಮ ಮನೆಯ ಬಳಿ ಇರುವ ಸೇತುವೆ ಹತ್ತಿರ ಕುಳಿತಿದ್ದೆ. ಆಗ ರಸ್ತೆಯಲ್ಲಿ ಗಲಾಟೆಯಾಗುತ್ತಿತ್ತು. ಅಂದರೆ ಚಾಸಾ.2

ಮತ್ತು ಆರೋಪಿತರ ನಡುವೆ ಗಲಾಟೆ ಆಗುತ್ತಿತ್ತು. ಆಗ ರಾತ್ರಿ 08.00 ಗಂಟೆ ಆಗಿತ್ತು. ಬೀದಿ ದೀಪದ ಬೆಳಕು ಇತ್ತು ಮತ್ತು ಗಣಪತಿ ಬಿಡುವ ಸಲುವಾಗಿ ಲೈಟ್ ಗಳನ್ನು ಹಾಕಿದ್ದರು. ಚಾಸಾ.2 ರವರನ್ನು ತಳ್ಳಿಕೊಂಡು ಹೋಗಿ 1 ನೇ ಆರೋಪಿ ಲಾಂಗ್ ನಿಂದ ಅವರ ಕತ್ತಿಗೆ ಹೊಡೆದ. ಆಗ ಚಾಸಾ.2 ತನ್ನ ಬಲ ಗೈ ನ್ನು ಅಡ್ಡ ಹಿಡಿದ. ಆಗ ಆ ಲಾಂಗ್ ನಿಂದ ಸುಮಾರು ನಾಲ್ಕೈದು ಏಟು ಗಳನ್ನು ಆ ಚಾಸಾ.2 ರವರ ಕೈ ಗೆ ಆದವು. ಆರೋಪಿ ಗುಂಡ ಅಂದರೆ 5 ನೇ ಆರೋಪಿ ಚಾಕುವಿನಿಂದ ಚಾಸಾ.2 ರವರ ಬೆನ್ನಿಗೆ ಚುಚ್ಚಿದ. ಉಳಿದ ಆರೋಪಿತರು ಕೈ ಗಳಿಂದ ಚಾಸಾ.2 ರವರನ್ನು ಹೊಡೆದರು. ಆಗ ನಾನು ಬಾಯಿ ಬಡಿದುಕೊಂಡೆನು. ನನ್ನೊಂದಿಗೆ ಅಲ್ಲಿ ಚಾಸಾ.12 ಇದ್ದರು. ಚಾಸಾ.5 ರವರು ಅಲಿಲಗೆ ಬಂದರು. ನಂತರ ಎಲ್ಲರೂ ಅಂದರೆ ಚಂದ್ರು ಮತ್ತು ಇತರರು ಚಾಸಾ.2 ರವರನ್ನು ಒಮಿನಿ ಕಾರ್ ನಲ್ಲಿ ಆಸ್ಪತ್ರೆ ಗೆ ಕರೆದುಕೊಂಡು ಹೋದರು. ಆರೋಪಿತರಲ್ಲೇ ಒಬ್ಬ ಆ ಸ್ಥಳಕ್ಕೆ ಕಾರ್ ನಲ್ಲಿ ಬಂದಿದ್ದ. ಉಳಿದವರು ಆಟೋದಲ್ಲಿ  ಬಂದಿದ್ದರು. ಆಟೋ ಅಲ್ಲಿ ನಿಂತಿತ್ತು. ಆರೋಪಿತರು ಕಾರು ಹತ್ತಿಕೊಂಡು ಹೋದರು.  ಗಲಾಟೆ ಆದ ಸ್ಥಳದಲ್ಲಿ ರಕ್ತದ ಕಲೆ ಬಿದ್ದಿತ್ತು.  ಆ ಲಾಂಗ್ ಮತ್ತು ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ನಾನು ಗಲಾಟೆಯನ್ನು ನೋಡಿದ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದಾರೆ.

3. ನಂತರದಲ್ಲಿ ನನ್ನನ್ನು ಪೊಲೀಸರು ಎಲ್ಲಿಗೂ ಕರೆದುಕೊಂಡು ಹೋಗಿರುವುದಿಲ್ಲ ಮತ್ತು ನಾನು ಸಾಕ್ಷ್ಯವನ್ನು ನುಡಿದಿರುವುದಿಲ್ಲ.  ಸಾಕ್ಷಿಗೆ ಕಲಂ 164 ದ.ಪ್ರ.ಸ. ರ ಅಡಿಯಲಿಲ ನಾಯಾಲಯ ದಾಖಲಿಸಿಕೊಂಡಿರುವ ಹೇಳಿಕೆಯನ್ನು ತೋರಿಸಿ ಕೇಳಲಾಗಿ , ಈ ಸಹಿಯನ್ನು ನಾನು ಠಾಣೆಯಲ್ಲಿ ಮಾಡಿರುತ್ತೇನೆ ಎನ್ನುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ವಿಶೇಷ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲು ಃ ಮಾನ್ಯ ವಿಶೇಷ ಅಭಿಯೋಜಕರಿಂದ**

4. ಗಲಾಟೆ ಆಗುತ್ತಿದ್ದ ಸಂದರ್ಬದವನ್ನು ನಾನು ನೋಡಿದಾಗ ಚಾಸಾ.2 ರವರ ಎಡ ಗೈ ನಲ್ಲಿ ವಾಚ್ ಇತ್ತು ಎನ್ನುವುದು ಸರಿ. ಚಾಸಾ.12 ರವರ ಮನೆ ನಮ್ಮ ಮನೆಗಿಂತ ಮುಖ್ಯ ರಸ್ತೆ ಗೆ ಹತ್ತಿರದಲ್ಲಿದೆ ಎನ್ನುವುದು ಸರಿ. ಆಕೆ ಸಹ ರಸ್ತೆಯಲ್ಲಿ ನಿಂತುಕೊಂಡು ಗಲಾಟೆಯನ್ನು ನೋಡುತ್ತಿದ್ದರು ಎನ್ನುವುದು ಸರಿ. ಚಾಸಾ.13 ರಿಂದ 15 ರವರು ಆರೋಪಿತರ ಸ್ನೇಹಿತರು ಎನ್ನುವುದು ಸರಿ. ಅವರುಗಳು ಸಹ ಗಲಾಟೆಯನ್ನು ದೂರದಲಿಲ ನಿಂತುಕೊಂಡು ನೋಡುತ್ತಿದ್ದರು ಎನ್ನುವುದು ಸರಿ. ಚಾಸಾ.2 ರವರ ಕೈ ಗೆ ಏಟು ಬಿದ್ದಾಗ ಅವರು ಕಟ್ಟಿದ್ದ ಕೈ ನಲಿಲದ್ದ ವಾಚ್ ಕೆಳಗೆ ಬಿತ್ತು ಎನ್ನುವುದು ಸರಿ. 1 ನೇ ಆರೋಪಿ ಲಾಂಗ್ ನಿಂದ ಹೊಡೆದಾಗ ಏಟು ಬಿದ್ದದ್ದು ಚಾಸಾ.2 ರವರ ಎಡಗೈ ಗೆ ಎನ್ನುವುದು ಸರಿ. ಬಹಳ ಸಮಯವಾದ್ದರಿಂದ ಮರೆವಿನಿಂದ ಮುಖ್ಯ ವಿಚಾರಣೆಯಲ್ಲಿ "ಬಲಗೈ" ಎಂದಿರುತ್ತೇನೆ.

5. ಗಲಾಟೆಯಾಗುತ್ತಿದ್ದಾಗ ಚಾಸಾ.1 ಬಿಡಿಸಲು ಪ್ರಯತ್ನ ಪಡುತ್ತಿದ್ದ ಎನ್ನುವುದು ಸರಿ. ಆ ಸಂದರ್ಭದಲ್ಲಿ ಚಾಸಾ.1 ಧರಿಸಿದ್ದ ಬಿಳಿಯ ಬಟ್ಟೆ ಗೆ ರಕ್ತ ವಾಗಿತ್ತು ಎನ್ನುವುದು ಸರಿ. ಅದೇ ದಿನ ರಾತ್ರಿ ಚಾಸಾ.1 ರವರೊಂದಿಗೆ ಪೊಲೀಸರು ಗಲಾಟೆ ನಡೆದ ಸ್ಥಳಕೆಕ ಬಂದು ಬರೆದುಕೊಂಡು ಹೋಗಿದ್ದಾರೆ ಎನ್ನುವುದು ಸರಿ. ಮರುದಿನ ನನ್ನನ್ನು ಮತ್ತು ಚಾಸಾ.12 ರವರನ್ನು ಪೊಲೀಸರು ಠಾಣೆಗೆ ಕರೆಯಿಸಿ ಏನು ನಡೆಯಿತು ಎನ್ನುವ ಬಗ್ಗೆ ಹೇಳಿಕೆಯನ್ನು ದಾಖಲಿಸಿಕೊಂಡಿದ್ದಾರೆ ಎನ್ನುವುದು ಸರಿ. ಆಗ ನಾನು , ಚಾಸಾ.2 ರವರ

ಎಡ ಕೈಗೂ ಏಟಾಗಿತ್ತು , ಚಾಸಾ.1 ಜಗಳವನ್ನು ಬಿಡಿಸುತ್ತಿದ್ದರು ಎಂದು ಹೇಳಿರುತ್ತೇನೆ ಎನ್ನುವುದು ಸರಿ. ನಾನು ಪೊಲೀಸ್ ಠಾಣೆಗೆ ಹೋದಾಗ , ಸಾಕ್ಷಿ ವಿಚಾರಣೆಗೆ ಎಂದು ನನ್ನ ಸಹಿಯನ್ನು ಪಡೆದಿರುತ್ತಾರೆ ಎನ್ನುವುದು ಸರಿ. ಸಾಕ್ಷಿ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಮುಚ್ಚಳಿಕೆಯನ್ನು ನಿಪಿ.21 ಎಂತಲೂ, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ.21(ಎ) ಎಂತಲೂ ಗುರುತುಪಡಿಸಿಕೊಳ್ಳಲಾಯಿತು. ಇದಾದ 15-20 ದಿನಗಳ ನಂತರ ನನ್ನನ್ನು ಮತ್ತು ಚಾಸಾ.12 ರಿಂದ 15 ರವರನ್ನು ಪೊಲೀಲಸರು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು ಎನ್ನುವುದು ಸರಿ. ಆಗ ಒಬ್ಬ ಒಬ್ಬರನ್ನೇ ಪ್ರತ್ಯೇಕವಾಗಿ ನ್ಯಾಯಾಧೀಶರ ಮುಂದೆ ಕಳುಹಿಸಿದ್ದರು ಎನ್ನುವುದು ಸರಿ. ಆಗ ನ್ಯಾಯಾಧೀಶರು ಏನು ಸತ್ಯ ಗೊತ್ತಿದೆಯೋ ಅದನ್ನು ಹೇಳಿ ಎಂದಿದ್ದರು ಎನ್ನುವುದು ಸರಿ. ಆಗ ಅಲ್ಲಿ ನಾಯಾಧೀಶರನ್ನು ಮತ್ತು ಟೈಪಿಸ್ಟ್ ನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎನ್ನುವುದು ಸರಿ. ನಂತರ ನಾನು ನೋಡಿದ್ದನ್ನು ಹೇಳಿದೆ. ಅದನುನ ಟೈಪ್ ಮಾಡಿಸಿ, ನನಗೆ ಓದಿ ತಿಳಿಸಿ ನಂತರ ನನ್ನ ಸಹಿಯನ್ನು ಪಡೆದುಕೊಂಡರು ಎನ್ನುವುದು ಸರಿ. ಈಗ ನೋಡುತ್ತಿರುವ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದನುನ ನಾನು ನ್ಯಾಯಾದೀಶರ ಮುಂದೆ ಮಾಡಿರುತ್ತೇನೆ. ಸದರಿ ಹೇಳಿಕೆಯನ್ನು ನಿಪಿ.22 ಎಂತಲೂ , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ.22(ಎ) ಎಂತಲೂ ಗುರುತುಪಡಿಸಿಕೊಳ್ಳಲಾಯಿತು. ನ್ಯಾಯಾದೀಶರ ಮುಂದೆ ನಾನು ಹೇಳುಎವಾಗ ನಾನು , ನ್ಯಾಯಾಧೀಶರು ಮತ್ತು ಟೈಪಿಸ್ಟ್ ನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎನ್ನುವುದು ಸರಿ.

**(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು. )**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**